## 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .

SC. No.40-2024

ದೋ.ಸಾ. 1

ಫ್ರಾ.ಸಾ. 1

ಪ್ರ.ವ.ಬೊ.ದಿನಾಂಕ. 28-04-2025

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ಡಾ.ಪ್ರವೀಣಾ ಶರ್ಮಾ |
| ತಂದೆ / ಗಂಡನ ಹೆಸರು | - | ವಿವೇಕ್ |
| ವಯಸ್ಸು | - | 35 |
| ಉದ್ಯೋಗ | - | ಡೆಂಟಿಸ್ಟ್, ಸುಬ್ಬಯ್ಯ ಆಸ್ಪತ್ರೆ, ಶಿವಮೊಗ್ಗ |
| ವಾಸ ಸ್ಥಳ | - | ಶಿವಮೊಗ್ಗ |

ಆರೋಪಿಯನ್ನು ವಿಸಿ ಮೂಲಕ ಹಾಜರುಪಡಿಸಲಾಗಿರುತ್ತದೆ.
ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

ಚಾ.ಸಾ.2 ನನ್ನ ಗಂಡ. ಚಾ.ಸಾ.5 ಮತ್ತು 6 ನನ್ನ ಮಾವ ಮತ್ತು ಅತ್ತೆ. ನನಗೆ ಚಾ.ಸಾ.7 ಮತ್ತು 8 ರವರ ಪರಿಚಯ ಇರುತ್ತದೆ. ಈಗ ವಿಸಿಯಲ್ಲಿ ಕಾಣುತ್ತಿರುವ ವ್ಯಕ್ತಿಯು ನನ್ನ ಗಂಡನ ಅಣ್ಣ ಆಗಿರುತ್ತಾರೆ.

ನಾನು ಶಿವಮೊಗ್ಗದಲ್ಲಿ ಕೆಲಸಕ್ಕೆ ಹೋಗುವ ಪೂರ್ವದಲ್ಲಿ ದಾವಣಗೆರೆಯಲ್ಲಿ ನನ್ನ ಗಂಡನ ಜೊತೆ ನನ್ನ ಒಂದು ವರ್ಷದ ಮಗು, ನನ್ನ ಅತ್ತೆ ಮತ್ತು ಮಾವನ ಜೊತೆ ವಾಸವಾಗಿದ್ದೆ. ಆ ಸಮಯದಲ್ಲಿ ಆರೋಪಿಯು ಕೂಡ ಅದೇ ಮನೆಯಲ್ಲಿ ಇರುತ್ತಿದ್ದರು. ಆರೋಪಿಯು ಆ ಸಮಯದಲ್ಲಿ ಎಲ್ಲಿಯೂ ಕೆಲಸಕ್ಕೆ ಹೋಗದೆ ಮನೆಯಲ್ಲಿಯೇ ಇರುತ್ತಿದ್ದರು. ಆತ ಇಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡಿರುತ್ತಾರೆ. ಅಲ್ಲದೇ ಆತ ಮನೆಯಲ್ಲಿ ಎಲ್ಲರ ಜೊತೆ ಜಗಳವಾಡುತ್ತ ಇರುತ್ತಿದ್ದರು. ಆತ ನನ್ನ ಅತ್ತೆ ಮತ್ತು ಮಾವನ ಜೊತೆ ಹಣವನ್ನು ಕೇಳುತ್ತಿದ್ದು, ಅಲ್ಲದೇ ತನಗೆ ಮದುವೆ ಮಾಡಿ ಹೇಳಿಕೊಂಡು ಜಗಳವಾಡುತ್ತಿದ್ದನು. ಆ ಸಮಯದಲ್ಲಿ ನಾನು ಮತ್ತು ನನ್ನ ಗಂಡ ಆರೋಪಿಗೆ ಮನೆಯಲ್ಲಿ ಶಾಂತವಾಗಿ ಇರಿ ಎಂದು ಹೇಳುತ್ತಿದ್ದೆವು. ನಾವು ಆ ರೀತಿ ಹೇಳಿದರೂ ಕೂಡ ಆರೋಪಿಯು ನಮಗೆ ಬೈಯ್ಯುತ್ತಿದ್ದರು.

ದಿಃ 02-01-2024 ರಂದು ಮದ್ಯಾಹ್ನ 1-45 ಗಂಟೆ ಸಮಯದಲ್ಲಿ ನಾನು ಟಿವಿ ಹಾಕಿಕೊಂಡು ನನ್ನ ಮಗುವಿಗೆ ಊಟ ಮಾಡಿಸುತ್ತ ಇದ್ದೆ. ನಂತರ ಆರೋಪಿಯು ಬಂದವನೆ ಟಿವಿಯನ್ನು ಆಪ್ ಮಾಡಿದ್ದು, ನಾನು ಕೇಳಿದಾಗ ನನ್ನ ಜೊತೆ ಕೆಟ್ಟದಾಗಿ ನಡೆದುಕೊಂಡಿರುತ್ತಾನೆ. ಅಲ್ಲದೇ ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ. ಅಲ್ಲದೇ ನನ್ನ ಬಲಕಣ್ಣಿನ ಕೆಳಗಡೆ ಮುಷ್ಟಿಯಿಂದ ಹಲ್ಲೆ ಮಾಡಿರುತ್ತಾನೆ. ಅಲ್ಲದೇ ನನ್ನ ಮೈಕೈಯನ್ನು ಮುಟ್ಟಿ ಎಳೆದಾಡಿರುತ್ತಾನೆ. ಅದನ್ನು ಗಮನಿಸಿ ನನ್ನ ಗಂಡ, ಅತ್ತೆ ಮತ್ತು ಮಾವ ಆತನನ್ನು ಹಿಡಿದು ನಿಲ್ಲಿಸಲು ಪ್ರಯತ್ನಿಸಿರುತ್ತಾರೆ. ನಂತರ ನನ್ನ ಅತ್ತೆ ಮಾವ ಆರೋಪಿಯನ್ನು ಸಮಾಧಾನ ಪಡಿಸಿ ಒಳಗಡೆ ಕರೆದುಕೊಂಡು ಹೋದಾಗ ಆರೋಪಿಯು ಅಲ್ಲಿ ಗಾರ್ಡನ್ ಕೆಲಸಕ್ಕಾಗಿ ತಂದಿದ್ದ ಒಂದು ಮಚ್ಚನ್ನು ತೆಗೆದುಕೊಂಡು ಬಂದು ನನ್ನ ಗಂಡನ ಬಳಿ ನಿನ್ನ ಹೆಂಡತಿಯನ್ನು ಸಾಯಿಸುತ್ತೇನೆ ಎಂದು ಹೇಳಿ ನನ್ನ ತಲೆಗೆ ಮಚ್ಚಿನಿಂದ ಹಲ್ಲೆ ಮಾಡಲು ಬಂದಿರುತ್ತಾನೆ. ಆ ಸಮಯದಲ್ಲಿ ನನ್ನ

ಗಂಡ ನನಗೆ ಹೊಡೆತ ಬೀಳುವುದನ್ನು ತಪ್ಪಿಸಲು ಹೋದಾಗ ಮಚ್ಚು ನನ್ನ ಗಂಡನ ಬಲಗೈಗೆ ತಾಗಿ ಗಾಯವಾಗಿದ್ದಲ್ಲದೇ, ನನ್ನ ಎಡಪಕ್ಕೆಗೆ ಮತ್ತು ನನ್ನ ಎಡಕೈಯ ಮೇಲೆ ತಾಗಿ ಗಾಯವಾಗಿರುತ್ತದೆ. ಅಲ್ಲದೇ ಆರೋಪಿಯು ನಮ್ಮನ್ನು ಉದ್ದೇಶಿಸಿ ಸಾಯಿಸುತ್ತೇನೆ ಎಂದು ಬೆದರಿಕೆಯನ್ನು ಕೂಡ ಹಾಕಿರುತ್ತಾನೆ.

ನಂತರ ನಾವು ಚಿಗಟೇರಿ ಆಸ್ಪತ್ರೆಗೆ ಹೋಗಿ ಅಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇವೆ. ನಂತರ ಅದೇ ದಿನ ಸಂಜೆಯ ಸಮಯದಲ್ಲಿ ಬಡಾವಣೆ ಪೊಲೀಸ್ ಠಾಣೆಗೆ ಹೋಗಿ ನಾನು ಗಣಕೀಕೃತ ದೂರನ್ನು ಸಲ್ಲಿಸಿರುತ್ತೇನೆ. ಸದರಿ ದಾಖಲೆಯನ್ನು ನಾನು ಹೇಳಿದ ಪ್ರಕಾರ ಠಾಣೆಯಲ್ಲಿ ಗಣಕೀಕೃತ ಮಾಡಿರುತ್ತಾರೆ. ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.1 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು.

ನಾನು ದೂರು ಸಲ್ಲಿಸಿದ ಬಳಿಕ ಮರುದಿನ ಪೋಲೀಸರು ನಮ್ಮ ಮನೆಯ ಬಳಿ ಬಂದಿರುತ್ತಾರೆ. ಆ ಸಮಯದಲ್ಲಿ ಪೋಲೀಸರ ಜೊತೆ ಇಬ್ಬರು ವ್ಯಕ್ತಿಗಳು ಕೂಡ ಬಂದಿದ್ದು, ನಂತರ ನಾನು ತೋರಿಸಿದ ಸ್ಥಳದಲ್ಲಿ ಪೋಲೀಸರು ದಾಖಲಾತಿಯನ್ನು ಬರೆದು ಸದರಿ ದಾಖಲಾತಿಗೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಆ ಸಮಯದಲ್ಲಿ ನಾನು ಪೋಲೀಸರಿಗೆ ಆರೋಪಿಯು ನನಗೆ ಹಲ್ಲೆ ಮಾಡಲು ಉಪಯೋಗಿದ ಮಚ್ಚನ್ನು ಅಲ್ಲದೇ ಘಟನಾ ಸ್ಥಳವನ್ನು ಹಾಗೂ ನಾನು ಘಟನೆಯ ಸಮಯದಲ್ಲಿ ಧರಿಸಿದ್ದ ಚೂಡಿ ಟಾಪನ್ನು ಕೂಡ ನೀಡಿದ್ದು, ಅವುಗಳನ್ನು ಕೂಡ ಪೋಲೀಸರು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ. ಸಾಕ್ಷಿಯು ಗುರುತಿಸಿದ ದಾಖಲೆಯು ಪಂಚನಾಮೆಯಾಗಿದ್ದು, ಅದನ್ನು ನಿ.ಪಿ.2 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಸಾಕ್ಷಿದಾರರಿಗೆ ಆರೋಪಿ ಪರ ವಕೀಲರ ಸಮಕ್ಷಮದಲ್ಲಿ ಎರಡು ಸೀಲು ಹಾಕಿದ ಬಟ್ಟೆಯ ಚೀಲವನ್ನು ಅರಗು ಸೀಲು ತೆರೆದು ತೋರಿಸಲಾಗಿದ್ದು, ಅದರಲ್ಲಿ ಒಂದು ಮಚ್ಚು ಹಾಗೂ ಒಂದು ಚೂಡಿ ಟಾಪ್ ಕಂಡುಬಂದಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು, ಅವುಗಳಲ್ಲಿ ಮಚ್ಚನ್ನು ಮು.ಮಾ.1 ಎಂದು ಹಾಗೂ ಅದನ್ನು ಇಡಲಾಗಿರುವ ಬಟ್ಟೆಯ ಚೀಲವನ್ನು ಮು.ಮಾ.2 ಎಂದು, ಚೂಡಿ ಟಾಪನ್ನು ಮು.ಮಾ.3 ಎಂದು, ಅದನ್ನು ಇಡಲಾದ ಬಟ್ಟೆಯ ಚೀಲವನ್ನು ಮು.ಮಾ.4 ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಪೋಲೀಸರು ಘಟನಾ ಸ್ಥಳವನ್ನು ತೋರಿಸಿದ ಕುರಿತು ಪೋಟೋಗಳನ್ನು ತೆಗೆದಿರುತ್ತಾರೆ. ಸಾಕ್ಷಿಯು ಗುರುತಿಸಿದ ಪೋಟೋಗಳನ್ನು ಕ್ರಮವಾಗಿ ನಿ.ಪಿ.3 ರಿಂದ 7 ಎಂದು ಗುರುತಿಸಲಾಯಿತು.

ತದನಂತರ ನನ್ನನ್ನು ಪೋಲೀಸರು ದಾವಣಗೆರೆಯ ನ್ಯಾಯಾಧೀಶರ ಎದುರು ಹಾಜರುಪಡಿಸಿದ್ದು, ಅಲ್ಲಿಯೂ ಕೂಡ ನಾನು ನ್ಯಾಯಾಧೀಶರ ಸಮಕ್ಷಮ ಈಗ ಹೇಳಿದ ರೀತಿಯಲ್ಲಿಯೇ ಹೇಳಿಕೆಯನ್ನು ನೀಡಿರುತ್ತೇನೆ. ಈ ಹಂತದಲ್ಲಿ ಆರೋಪಿ ಪರ ವಕೀಲರ ಸಮ್ಮುಖದಲ್ಲಿ ಒಂದು ಸೀಲು ಮಾಡಿದ ಲಕೋಟೆಯನ್ನು ತೆರೆದು ಅದರಲ್ಲಿರುವ ಹೇಳಿಕೆಯನ್ನು ಸಾಕ್ಷಿಗೆ ತೋರಿಸಲಾಗಿದ್ದು, ಸಾಕ್ಷಿಯು ಅದನ್ನು ನೋಡಿ ಅದರಲ್ಲಿರುವ ಸಹಿ ತನ್ನದು ಎಂದು ಹೇಳಿಕೊಂಡಿರುತ್ತಾರೆ. ಕಾರಣ ಸದರಿ ಹೇಳಿಕೆಯನ್ನು ನಿ.ಪಿ.8 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.8(ಎ) ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಆರೋಪಿ ಪರ ವಕೀಲರಿಂದ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ನ್ಯಾಯಾಲಯಕ್ಕೆ ತಾನು ಆರೋಪಿಯನ್ನು ಜೈಲಿನಲ್ಲಿ ಭೇಟಿಯಾದಾಗ ಆತನು ಮಾನಸಿಕವಾಗಿ ಇನ್ನು ಸರಿಯಾದ ಸ್ದಿಮಿತೆಯನ್ನು ಹೊಂದಿಲ್ಲ ಎಂದು ಹೇಳಿಕೊಂಡಿದ್ದು, ಈ ಹಂತದಲ್ಲಿ ಆರೋಪಿಯನ್ನು ವಿಸಿ ಮೂಲಕ ಚರ್ಚಿಸಿದಾಗ ಆರೋಪಿಯು ಪ್ರಾ.ಸಾ.1 ರವರ ತಂದೆಯ ಕುರಿತಾಗಿ ಅನುಚಿತವಾಗಿ ಮಾತನಾಡುತ್ತಿರುವುದು ಕಂಡುಬಂದಿದ್ದು, ಈ ಹಂತದಲ್ಲಿ ಆರೋಪಿಯ ತಂದೆ ನ್ಯಾಯಾಲಯದಲ್ಲಿ ಹಾಜರಿದ್ದು, ಅವರು ಕೂಡ ಆರೋಪಿಯನ್ನು ಹೆಚ್ಚಿನ ಚಿಕಿತ್ಸೆಗೆ ಕೋರಿಕೊಂಡಿದ್ದು, ಕಾರಣ ಪಾಟೀಸವಾಲನ್ನು ಮುಂದೂಡಲಾಗಿರುತ್ತದೆ. )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

PRAVEEN KUMAR RAGHAV NAIK

Digitally signed by PRAVEEN KUMAR RAGHAV NAIK
Date: 2025.04.28 15:20:47 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.